# ಚಳಿಗೆ ಬೇಕು ಲೇಯರ್ ಉಡುಪು!

**ಇನ್ನೇನು ಕ್ರಿಸ್‌ಮಸ್ ಹತ್ತಿರದಲ್ಲಿದೆ. ಅದರ ಹಿಂದೆಯೇ ಹೊಸ ವರ್ಷದ ಸಂಭ್ರಮ ಮೊಳಗಲಿದೆ. ನಂತರ ಪ್ರೇಮಿಗಳ ದಿನ ಕೂಡ ಬಂದೇ ಬಿಡುತ್ತದೆ. ಈ ಸಾಲು ಸಾಲು ಸಂಭ್ರಮಗಳಿಗೆ ನೀವು ವಿನೂತನ ರೀತಿಯಲ್ಲಿ ತಯಾರಾಗುವುದು ಬೇಡವೇ? ಚಳಿ ಎಂದು ಫ್ಯಾಷನ್ ಮೋಹಕ್ಕೆ ತೆರೆ ಎಳೆಯಬೇಕಿಲ್ಲ. ಚಳಿಗಾಲದಲ್ಲೂ ನಿಮ್ಮ ಅಂದ–ಅಭಿರುಚಿಗೆ ಹೊಸ ಭಾಷ್ಯ ಬರೆಯಬಹುದು.**

■ **ಸುಶೀಲಾ ಡೋಣೂರ**

ಡಿಸೆಂಬರ್ ಬಂತೆಂದರೆ ಚುಮುಚುಮು ಚಳಿಯ ಚೆಲ್ಲಾಟ ಶುರುವಾಗಿ ಬಿಡುತ್ತದೆ. ಜನವರಿಗಂತೂ ಈ ಚಳಿ ತಾರಕಕ್ಕೇರುತ್ತದೆ. ಬೆಳ್ಳಂಬೆಳಿಗ್ಗೆ ನುಸುಳುವ ಶೀತಗಾಳಿ, ಮಧ್ಯಾಹ್ನದ ಒಣ ಹವೆ, ರಾತ್ರಿಯ ಥಂಡಿ ಥಂಡಿ ಹವಾ... ಇದರ ನಡುವೆಯೇ ಪಾರ್ಟಿ, ಹಬ್ಬ, ಸಮಾರಂಭ, ರಜೆಯ ಮೋಜುಗಳೆಲ್ಲವೂ ಇದ್ದೇ ಇರುತ್ತವೆ; ಚಳಿಗಾಲದ ಉಡುಗೆ ಏನು ಎಂಬ ಚಿಂತೆ ಬೇಡ. ಈ ಕಾಲಮಾನಕ್ಕೆ ನಿಮ್ಮದೇ ಆದ ಲೇಯರ್ ಫ್ಯಾಷನ್ ಸೃಷ್ಟಿಸಿಕೊಳ್ಳಿ.

ಬೇಸಿಗೆಯ ಫ್ಯಾಷನ್‌ನಷ್ಟು ಸುಲಭವೇನಲ್ಲ ಈ ಚಳಿಗಾಲದ ಫ್ಯಾಷನ್. ಶೀತಗಾಳಿ ಹೊತ್ತು ತರುವ ಥಂಡಿಯಿಂದ ರಕ್ಷಿಸಿಕೊಳ್ಳುವ ಭರದಲ್ಲಿ ತುಸು ಭಾರವೇ ಎನ್ನುವಷ್ಟು ವಸ್ತ್ರಗಳು ಕೆಲವೊಮ್ಮೆ ಫ್ಯಾಷನ್ ಪ್ರಜ್ಞೆಯನ್ನು ತಪ್ಪಿಸುವುದೂ ಇದೆ. ಟೋಪಿಗಳು, ಕೈಗವಸುಗಳು, ಮಫ್ಲರ್, ಸ್ಕಾರ್ಫ್, ಸ್ವೆಟರ್, ಜಾಕೆಟ್, ಸೂಟ್... ಹೀಗೆ ಮೈಮೇಲೆ ಹೆಚ್ಚುತ್ತ ಹೋಗುವ ಬಟ್ಟೆಗಳ ಲೇಯರ್‌ಗಳು ಹೆಂಗಳೆಯರ ಸೌಂದರ್ಯವನ್ನು ಮರೆಮಾಚುವುದೂ ಇದೆ.

ಆದರೇನು ಲೇಯರ್‌ಗಳಿಗೂ, ಚಳಿಗಾಲಕ್ಕೂ ಒಂದು ಬಗೆಯ ಬೆಸುಗೆ ಇದೆ. ಚಳಿಗಾಲಕ್ಕೆ ಮೈಮೇಲೆ ಬಟ್ಟೆಗಳ ಸಂಖ್ಯೆ ಹೆಚ್ಚುತ್ತದೆ. ಆದರೆ ಹೇಗೆಂದರೆ ಹಾಗೆ ಬಟ್ಟೆಯ ಮೇಲೊಂದು ಬಟ್ಟೆ ತೊಟ್ಟು ಅಂದಗೆಡಿಸಿಕೊಳ್ಳುವ ಬದಲು ಆಕರ್ಷಕ ಮೈಮಾಟ ಮುಚ್ಚಿ ಹೋಗದಂತೆ ಸೊಗಸಾಗಿ ದಿರಿಸುಗಳ ಲೇಯರ್ ಮಾಡಿಕೊಳ್ಳುವ ಕಲೆ ಗೊತ್ತಿರಬೇಕು. ಆಗ ಪ್ರತಿ ಚಳಿಗಾಲಕ್ಕೂ ಬೇರೆಯದೇ ಲೇಯರ್ ಮೋಡಿ ಮಾಡಬಹುದು.

ಅದಕ್ಕಾಗಿ ನೀವು ಹೆಚ್ಚೇನೂ ಮಾಡಬೇಕಾಗಿಲ್ಲ. ಎಂದಿನ ಜೀನ್ಸ್, ಲೆಗ್ಗಿಂಗ್, ಟೀ–ಶರ್ಟ್, ಟಾಪ್, ಕುರ್ತಾಗಳ ಜೊತೆಗೆ ಅವೇ ಸ್ವೆಟರ್–ಶ್ರಗ್–ಮಫ್ಲರ್–ಸ್ಕಾರ್ಫ್‌ಗಳನ್ನು ಒಪ್ಪಾಗಿ ಜೋಡಿಸಿಕೊಳ್ಳುವ ಬಗೆ ಗೊತ್ತಿರಬೇಕಷ್ಟೆ. ಅಂದ ಹಾಗೆ ಆಯಾ ಸಮಯ, ಸಂದರ್ಭ ಹಾಗೂ ನಿಮ್ಮ ಮೂಡ್‌ಗೆ ತಕ್ಕ ಹಾಗೆ ಈ ಲೇಯರ್ ಹೊಂದಿಸಿಕೊಳ್ಳುವುದು ಬಹಳ ಮುಖ್ಯ.

## ಬೇಸ್ ಲೇಯರ್

ಕಾಲೇಜು ಅಥವಾ ಕಚೇರಿ ದಿನವನ್ನಾರಂಭಿಸಲು ಚಳಿಯ ಮುಂಜಾವಿನಲ್ಲಿ ಹೊರಬೀಳುವಾಗ ಬೇಸ್ ಲೇಯರ್ ಮೇಲೆ ಹೆಚ್ಚಿನ ಗಮನ ಕೊಡಿ. ಏಕೆಂದರೆ ಲೇಯರ್ ದಿರಿಸಿಗೆ ಇದೇ ಮೂಲಾಧಾರ. ಅಲ್ಲದೇ ಹೊತ್ತೇರಿದಂತೆ ಮೈ ಬೆವರಲು ಆರಂಭಿಸಿದಾಗ ಮೇಲಿನ ಒಂದೊಂದೇ ಲೇಯರ್‌ಗಳನ್ನು ಕಳಚಿಡುತ್ತ ಹೋದರೂ ಒಟ್ಟಾರೆ ನಿಮ್ಮ ಅಂದಕ್ಕೆ ಕುಂದು ತರದ ರೀತಿಯಲ್ಲಿರಬೇಕು ಈ ಬೇಸ್ ಲೇಯರ್.

ತುಸು ತಿಳಿ ಬಣ್ಣದ ಜೀನ್ಸ್ ಅಥವಾ ಲೆಗ್ಗಿಂಗ್ ಇರಲಿ. ಮೇಲೆ ಮೂರ್ನಾಲ್ಕು ತೊಡುಗೆಗಳು ಬರುವುದರಿಂದ ಕಲರ್ ಮ್ಯಾಚ್ ಮಾಡಲು ಈ ಬೇಸ್ ಲೇಯರ್ ಅನ್ನು ಸಾಧ್ಯವಾದಷ್ಟು ಸರಳವಾಗಿಡಿ. ಅದರ ಮೇಲೆ ಫುಲ್ ಸ್ಲೀವ್ಸ್ ಬಾಡಿ ಫಿಟಿಂಗ್ ಟೀ–ಶರ್ಟ್ ಹಾಕಿ. ಬೇಸ್–ಲೇಯರ್‌ಗಳು ನಿಮ್ಮ ದೇಹದ ಆಕಾರ ಸ್ಲಿಮ್ ಆಗಿ ಕಾಣುವಂತಿರಲಿ.

## ಎರಡನೇ ಲೇಯರ್

ಎರಡನೇ ಲೇಯರ್ ಬಗ್ಗೆ ಸ್ವಲ್ಪ ಹೆಚ್ಚಿನ ಗಮನವಿರಲಿ. ಮೊದಲ ಲೇಯರ್‌ನ ಓರೆಕೋರೆಗಳನ್ನೂ ತಿದ್ದಬಲ್ಲದ್ದಾದ್ದರಿಂದ ಇದು ತುಸು ಗಾಢ ಬಣ್ಣದ್ದಾಗಿದ್ದರೆ ಚೆಂದ. ಲೆಗ್ಗಿಂಗ್‌ನ ಬಣ್ಣವನ್ನು ಆಧರಿಸಿ ಸ್ಕರ್ಟ್ ಆರಿಸಿಕೊಳ್ಳಿ. ಸ್ಕರ್ಟ್‌ನ ಉದ್ದವೂ ಕೂಡ ನಿಮ್ಮ ನಿಲುವು, ವಯಸ್ಸು ಹಾಗೂ ಸಂದರ್ಭವನ್ನು ಅನುಸರಿಸಿ ಆಯ್ಕೆ ಮಾಡಿಕೊಳ್ಳ ಬೇಕಾಗುತ್ತದೆ. ಕಾಲೇಜಿಗಾದರೆ ಮೊಳಕಾಲು ಮೇಲಿನ ಸ್ಕರ್ಟ್ ನಡೆಯುತ್ತದೆ. ಕಚೇರಿಗಾದರೆ ಮೊಳಕಾಲು ಕೆಳಗಿನ ಉದ್ದ ಒಪ್ಪಿಗೆಯಾಗುವುದು.

